## ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ, ಹುಬ್ಬಳ್ಳಿ.

**C.C. 1634-22**

ಪಿ.ಡಬ್ಲ್ಯು- 1
ಸಿ.ಡಬ್ಲ್ಯು-1

ಸಾಕ್ಷಿದಾರರ ಹೆಸರು : ಶುಭಂ ಜೈನ್

ತಂದೆ ಹೆಸರು : ಬಾಲಚಂದ್ರ

ವಯಸ್ಸು : 29 ವರ್ಷ

ಉದ್ಯೋಗ : ವ್ಯಾಪಾರ

ವಾಸಸ್ಥಳ : ಹುಬ್ಬಳ್ಳಿ

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 16.03.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಮೃತ ನಿರ್ಮಲಾ ನನಗೆ ದೊಡ್ಡಮ್ಮಳಾಗಬೇಕು. ಚಾಸಾ-10 ರವರು ಮೃತ ನಿರ್ಮಲಾ ಇವಳ ಮಗಳಾಗಬೇಕು.

ದಿಃ 22.2.2022 ರಂದು ಸಂಜೆಃ 7.10 ಕ್ಕೆ ನಾನು ವಿದ್ಯಾನಗರದಲ್ಲಿದ್ದಾಗ ಚಾಸಾ-10 ಇವಳು ನನಗೆ ಫೋನ್ ಮಾಡಿ ತಾನು ಮತ್ತು ತನ್ನ ತಾಯಿ ಬೈಕ್ ಮೇಲೆ ಹೋಗುತ್ತಿದ್ದಾಗ, ಹುಬ್ಬಳ್ಳಿ ಸರ್ವೋದಯ ಸರ್ಕಲ್ ಬಳಿ ಒಬ್ಬ ಕಾರ್ ಚಾಲಕನು ಅಪಘಾತಪಡಿಸಿದ್ದಾನೆಂದು ಹೇಳಿದ್ದಳು. ಆ ಅಪಘಾತದಲ್ಲಿ ತನ್ನ ತಾಯಿ ಗಂಭೀರ ಗಾಯಗೊಂಡಿದ್ದು, ಅವಳನು ಸಿಟಿ ಕ್ಲೀನಿಕ್ ಆಸ್ಪತ್ರೆಗೆ ದಾಖಲಿಸಲು ತೆಗೆದುಕೊಂಡು ಹೋಗುತ್ತಿರುವುದಾಗಿ ಹೇಳಿದ್ದಳು. ಕೂಡಲೇ ನಾನು ಆ ಆಸ್ಪತ್ರೆಗೆ ಹೋದೆ. ಅಲ್ಲಿ ಗಾಯಗೊಂಡ ನನ್ನ ದೊಡ್ಡಮ್ಮ ಉಪಚಾರ ಫಲಿಸದೇ ಮರಣ ಹೊಂದಿದಳು.

ಆ ನಂತರ ಅಲ್ಲೆ ಇದ್ದ ನನ್ನ ತಂಗಿ ಚಾಸಾ-10 ಇವಳು ತಾನು ಮತ್ತು ತನ್ನತಾಯಿ ಪ್ಲೇಜರ ಬೈಕ್ ನಂಃ ಕೆಎ-25 ಇ ಎನ್ 1250 ಮೇಲೆ ಮಾರ್ಕೇಟ್ ಹೋಗಿ ವಾಪಸ್ ಕುಸುಗಲ್ ರೋಡಿ ಮೂಲಕ ಮನೆಗೆ ಬರುತ್ತಿದ್ದಾಗ ಸರ್ವೋದಯ ಸರ್ಕಲ್ ಹತ್ತಿರ ಆ ಅಪಘಾತವಾಗಿದೆ ಎಂದು ಹೇಳಿದಳು. ಕಾರ್ ಚಾಲಕನ ತನ್ನ ಹಿಂದಿನಿಂದ ಕಾರನ್ನು ನಡೆಸಿಕೊಂಡು ಬಂದು ಅಪಘಾತಪಡಿಸಿ ಹಿಂಬದಿ ಸವಾರಳನ್ನು ಕೆಳಗೆ ಕೆಡವಿ ಅವಳ ಮೇಲೆ ಕಾರ್ ಚಲಾಯಿಸಿಕೊಂಡು ಮುಂದೆ ಹೋದ ಎಂದು ಹೇಳಿದಳು.

ಆಮೇಲೆ ನಾನು ಪೋಲಿಸ ಠಾಣೆಗೆ ಹೋಗಿ ದೂರನ್ನು ಕೊಟ್ಟೆವು. ಆ ದೂರನ್ನು ನೋಡುತ್ತಿದ್ದು ಅದನ್ನು ನಿಪಿ.1 ಎಂದು, ಸಾಕ್ಷಿ ಸಹಿಯನ್ನು ನಿಪಿ.1-ಎ ಎಂದು ಗುರುತಿಸಲಾಯಿತು.

ಅಪಘಾತವಾದ ಮರುದಿನ ಪೋಲಿಸರು ನನ್ನನ್ನು ಪೋಲಿಸ ಠಾಣೆಗೆ ಕರೆಸಿದ್ದರು, ಅವರ ತಾಬೆಯಲ್ಲಿ ಒಬ್ಬ ವ್ಯಕ್ತಿ ಇದ್ದ ಆತನ ಹೆಸರು ರಾಜೇಶ ಎಂದು ಹೇಳಿದರು, ಮತ್ತು ಆತ ಕಾರ್ ಚಾಲಕನಾಗಿದ್ದ ಎಂದು ಹೇಳಿದರು. ಆ ವ್ಯಕ್ತಿ ನ್ಯಾಯಾಲಯದ ಮುಂದಿರುವ ವ್ಯಕ್ತಿಯಾಗಿರುತ್ತಾನೆ. ಪೋಲಿಸರು ಆ ಕಾರನ್ನು ಸಹ ನನಗೆ ತೋರಿಸಿದ್ದಾರೆ ಅದು ಸ್ಯಾಂಟ್ರೋ ಕಾರ್ ಆಗಿತ್ತು, ನನಗೆ ಅದರ ನಂಬರ ಹೇಳಲು ಬರುವುದಿಲ್ಲ. ಆದರೆ ನೋಡಿದರೆ ಗುರುತಿಸುತ್ತೇನೆ. ಈಗ ಭಾವಚಿತ್ರ ನೋಡುತ್ತಿದ್ದು ಅದರಲ್ಲಿರುವ ಕಾರ್ ಮತ್ತು ಪ್ಲೇಜರ ಬೈಕನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಆ ಭಾವಚಿತ್ರದಲ್ಲಿ ನಾನು ಸಹ ಇರುತ್ತೇನೆ. ಆ ಭಾವಚಿತ್ರವನ್ನು ನಿಪಿ. 2 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ, ಆದರೆ ಮಾತನಾಡಲು ಬರುತ್ತದೆ. ಚಾಸಾ-10 ಯಾವ ನಂಬರಿನಿಂದ ಯಾವ ನಂಬರಿಗೆ ಫೋನ್ ಮಾಡಿದ್ದಳೆಂದು ದೂರಿನಲ್ಲಿ ಬರೆದಿಲ್ಲವೆಂದರೆ ಸರಿ. ನಾನು ಸಿಟಿ ಆಸ್ಪತ್ರೆಗೆ ಹೋಗಲು ಸುಮಾರು 7-8 ನಿಮಿಷ ತೆಗೆದುಕೊಂಡಿದ್ದೆ. ನಾನು ಆ ಆಸ್ಪತ್ರೆಯಲ್ಲಿ 8.39 ರವರೆಗೆ ಇದ್ದೆ. ಆ ನಂತರ ಪೋಲಿಸ ಠಾಣೆಗೆ ಹೋದೆ. ಅಪಘಾತವನ್ನು ನಾನು ಕಣ್ಣಾರೆ ನೋಡಿಲ್ಲ, ಚಾಸಾ-10 ರವರು ಹೇಳಿದ ಮೇರೆಗೆ ಗೊತ್ತಾಯಿತು ಅಂದರೆ ಸರಿ. ನಾನು ಘಟನಾ ಸ್ಥಳಕ್ಕೆ ಹೋಗಿಲ್ಲ. ಪೋಲಿಸರು ದೂರನ್ನು ಬರೆದು ಓದಿ ಹೇಳಿದರು, ಆ ನಂತರ ನಾನು ಅದಕ್ಕೆ ಸಹಿ ಮಾಡಿರುತ್ತೇನೆ. ಆ ದೂರು ಕೊಡಲು ಚಾಸಾ-10 ರವರಿಗೆ ತೊಂದರೆ ಇರಲಿಲ್ಲ ಅಂದರೆ ಅವಳು ಆಸ್ಪತ್ರೆಯಲ್ಲಿದ್ದಳು, ಆ ಕಾರಣ ನಾನು ದೂರು ಕೊಟ್ಟಿದ್ದೇನೆ.

ಮರುದಿನ ಪೋಲಿಸರು ಠಾಣೆಗೆ ಬರಲು ನೋಟಿಸು ಕೊಟ್ಟಿಲ್ಲ, ಆದರೆ ಪೋನ್ ಮಾಡಿದ್ದರು. ಚಾಸಾ-10 ಇವಳಿಗೆ ಸಹಾಯ ಮಾಡಲು ಸುಳ್ಳು ದೂರು ಕೊಟ್ಟಿದ್ದೇನೆಂದರೆ ಸರಿಯಲ್ಲ. ಆರೋಪಿ ಮತ್ತು ಆ ಅಪಘಾತಕ್ಕೂ ಸಂಬಂಧ ಇರದಿದ್ದರೂ ಸಹಿತ ಆತನ ಮೇಲೆ ಸುಳ್ಳು ದೂರು ಕೊಟ್ಟಿದ್ದೇವೆ ಮತ್ತು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಂ.ಎಫ್.ಸಿ. ಹುಬ್ಬಳ್ಳಿ.